521(39) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಾಲೆಗೆ ವಿದಾಯ ಹೇಳುವ ಮಕ್ಕಳ ಸಂಖ್ಯೆ ಕಡಿಮೆಗೊಳಿಸಲು (ವಿಶೇಷವಾಗಿ) ಅಂಗವೈಕಲ್ಯ ಮಕ್ಕಳಿಗೆ ಸರ್ಕಾರ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮ ಯೋಜನೆಗಳಾವುವು;

ಆ) ಇಂತಹ ಮಕ್ಕಳಿಗೆ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ಕಾರ ಒದಗಿಸಿರುವ ಸೌಲಭ್ಯ ಪ್ರಯೋಜನಗಳು ಫಲಾನುಭವಿಗಳಿಗೆ ಸರಿಯಾಗಿ ತಲುಪುತ್ತಿದೆಯೇ;

ಇ) ವಿದ್ಯಾರ್ಥಿ ವೇತನ ವಿತರಣೆಯಲ್ಲಿ ವಿಳಂಬವಾಗುತ್ತಿರುವುದು ನಿಜವೇ;

ಈ) ಇದಕ್ಕಾಗಿ ಅಂಗವಿಕಲ ಮಕ್ಕಳ ಅದಾಲತ್‌ನ್ನು ನಡೆಸಲಾಗಿದೆಯೇ;

ಉ) ಪ್ರತಿ ವಿದ್ಯಾರ್ಥಿಗೆ ಎಷ್ಟು ಶಿಷ್ಯ ವೇತನ ನೀಡಲಾಗುತ್ತದೆ ಹಾಗೂ ಇದ್ಯಾರ್ಥಿ ವೇತನ ಪಡೆಯುತ್ತಿರುವ ಜಿಲ್ಲಾವಾರು ಮಕ್ಕಳ ಸಂಖ್ಯೆ ಎಷ್ಟು?

ಶ್ರೀಮತಿ ಭಾಗೀರಥಿ ಮರುಳಸಿದ್ಧನಗೌಡ (ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು)

ಅ) ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯು ಅಂಗವಿಕಲ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲು ಈ ಕೆಳಕಂಡ ಯೋಜನೆಗನ್ನು ಜಾರಿಗೊಳಿಸುತ್ತಿದೆ.

1. ವಿದ್ಯಾರ್ಥಿ ವೇತನ
2. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ
3. ದೃಷ್ಟಿದೋಷವುಳ್ಳವರಿಗೆ ಮತ್ತು ಶ್ರವಣ ದೋಷವುಳ್ಳವರಿಗೆ ಉಚಿತ ವಸತಿಯತ ಶಾಲೆಗಳು
4. 1 ರಿಂದ 10ನೇ ತರಗತಿಯವರೆಗೆ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಬ್ರೈಲ್ ಪುಸ್ತಕಗಳ ಸರಬರಾಜು.
5. ಪಿ.ಯು.ಸಿ. ಮತ್ತು ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳ ಧ್ವನಿ ಸುರುಳಿಯೊಂದಿಗೆ ಟೇಪ್ ರೆಕಾರ್ಡರನ್ನು ಒದಗಿಸಲಾಗುತ್ತಿದೆ.
6. ಅರ್ಹ ಅಂಗವಿಕಲ ವಿದ್ಯಾರ್ಥಿಗಳಿಗೆ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ.
7. ರಾಜ್ಯ ಸರ್ಕಾರವು ಅನುದಾನ ಸಂಹಿತೆ ಪ್ರಕಾರ ಆರ್ಥಿಕ ಸಹಾಯವನ್ನು ನೀಡಿ ಸ್ವಯಂ ಸೇವಾ ಸಂಸ್ಥೆಗಳಿಗೆ ವಿಶೇಷ ಶಾಲೆ ಮತ್ತು ತರಬೇತಿ ಕೇಂದ್ರಗಳನ್ನು ನಡೆಸಲು ಪ್ರೋತ್ಸಾಹ.

ಆ) ತಲುಪುತ್ತಿವೆ.

ಇ) ಇಲ್ಲ.

ಈ) ಇಲ್ಲ.

ಉ)

	ಮಾಹೆಯಾನ
1 ರಿಂದ 5 ತರಗತಿಯವರೆಗೆ	ರೂ. 50.00
6 ರಿಂದ 10 ತರಗತಿಯವರೆಗೆ	ರೂ. 100.00
ಪಿ.ಯು.ಸಿ.	ರೂ. 150.00
ಪದವಿ ಶಿಕ್ಷಣ	ರೂ. 200.00
ತಾಂತ್ರಿಕ ಶಿಕ್ಷಣ	ರೂ. 250.00
ಸ್ನಾತಕೋತ್ತರ ಶಿಕ್ಷಣ	ರೂ. 300.00

ವಿದ್ಯಾರ್ಥಿ ವೇತನ ಪಡೆಯುತ್ತಿರುವ ಜಿಲ್ಲಾವಾರು ಮಕ್ಕಳ ಸಂಖ್ಯೆಯನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ಅನುಬಂಧ 1

2003–04ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳ ಸಂಖ್ಯೆ (ಜಿಲ್ಲಾವಾರು)

ಕ್ರ. ಸಂ.	ಜಿಲ್ಲೆಯ ವಿವರ	ಒಟ್ಟು ವಿದ್ಯಾರ್ಥಿಗಳು
1.	ಬೆಂಗಳೂರು ನಗರ	351
2.	ಬೆಂಗಳೂರು ಗ್ರಾಮಾಂತರ	242
3.	ಬೆಳಗಾಂ	97
4.	ಬೀದರ್	158
5.	ಬಿಜಾಪುರ	111
6.	ಬಳ್ಳಾರಿ	206
7.	ಬಾಗಲಕೋಟೆ	121
8.	ಚಿಕ್ಕಮಗಳೂರು	107
9.	ಚಿತ್ರದುರ್ಗ	244
10.	ಚಾಮರಾಜನಗರ	158
11.	ದಕ್ಷಿಣ ಕನ್ನಡ	79
12.	ದಾವಣಗೆರೆ	161
13.	ಧಾರವಾಡ	229
14.	ಗದಗ್	81
15.	ಹಾಸನ	108
16.	ಗುಲ್ಬರ್ಗಾ	116
17.	ಹಾವೇರಿ	118

1	2	3
18.	ಕೊಪ್ಪಳ	283
19.	ಕೋಲಾರ	195
20.	ಕೊಡಗು	55
21.	ಮೈಸೂರು	239
22.	ಮಂಡ್ಯ	256
23.	ರಾಯಚೂರು	181
24.	ಶಿವಮೊಗ್ಗ	181
25.	ಉತ್ತರ ಕನ್ನಡ	77
26.	ತುಮಕೂರು	314
27.	ಉಡುಪಿ	105
	ಒಟ್ಟು	**4576**

522(42) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತಾಲ್ಲೂಕುವಾರು ಸ್ತ್ರೀಶಕ್ತಿ ಸಂಘಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಎಷ್ಟೆಷ್ಟು ಸಂಘಗಳಿಗೆ ತಾಲ್ಲೂಕುವಾರ ಕಳೆದ ಮೂರು ವರ್ಷಗಳಲ್ಲಿ ಕೊಟ್ಟಿರುವ ಧನ ಸಹಾಯವೆಷ್ಟು;

ಇ) ಇವುಗಳಲ್ಲಿ ತಾಲ್ಲೂಕುವಾರು ಸಂಘಗಳು ಬ್ಯಾಂಕುಗಳ ಮುಖಾಂತರ ಸದಸ್ಯರಿಗೆ ಕೊಟ್ಟ ಸಾಲದ ಮೊತ್ತವೆಷ್ಟು? (ಕಳೆದ ಮೂರು ವರ್ಷಗಳ ವಿವರಗಳನ್ನೊದಗಿಸುವುದು);

ಶ್ರೀಮತಿ ಭಾಗೀರಥಿ ಮರುಳ ಸಿದ್ಧನಗೌಡ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ರಾಜ್ಯದಲ್ಲಿ ಇದುವರೆಗೆ 1 ಲಕ್ಷ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಗಿದೆ. (ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ)

ಆ) ಕಳೆದ 3 ವರ್ಷಗಳಲ್ಲಿ ಸ್ತ್ರೀಶಕ್ತಿ ಗುಂಪುಗಳಿಗೆ ತಲಾ ರೂ. 5000 ದಂತೆ ಒಟ್ಟು ರೂ. 4005.85 ಲಕ್ಷ ಸುತ್ತು ನಿಧಿಯನ್ನು ನೀಡಲಾಗಿದೆ. (ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ)

ಇ) ಕಳೆದ ಮೂರು ವರ್ಷಗಳಲ್ಲಿ ಬ್ಯಾಂಕುಗಳ ಮುಖಾಂತರ ಸದಸ್ಯರಿಗೆ ಕೊಟ್ಟ ಸಾಲದ ಮೊತ್ತ ರೂ. 14554.83 ಲಕ್ಷ ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.